# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು
ದಿನಾಂಕ: 16-02-2023

ಸಂಖ್ಯೆ:ಜಿಎಲ್13/137/2022-23

## ಸುತ್ತೋಲೆ

ವಿಷಯ: ಸುಶಾಸನ ಮಾಸದ ಅಂಗವಾಗಿ ಉತ್ತಮ ಹಾಗೂ ಪಾರದರ್ಶಕ ಆಡಳಿತವನ್ನು ರೂಪಿಸಲು ಕಡ್ಡಾಯವಾಗಿ ಜಾರಿಗೆ ತರಬೇಕಾಗಿರುವ ಕ್ರಮಗಳನ್ನು ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಇಡಿ/387/ಯುಆರ್‌ಸಿ/2022 ಬೆಂಗಳೂರು, ದಿನಾಂಕ: 01-12-2022
2. 'ಉನ್ನತ ಶಿಕ್ಷಣದಲ್ಲಿ ಸುಶಾಸನ: ಪರಿಕಲ್ಪನೆ ಮತ್ತು ಅನುಷ್ಠಾನ' ಕುರಿತ ಕಾರ್ಯಕ್ರಮದ ದಿನಾಂಕ: 03-12-22
3. ವಿ.ವಿ. ಸುತ್ತೋಲೆ ಸಂಖ್ಯೆ: ಜಿಎಲ್13/137/2022-23, ದಿನಾಂಕ: 08-12-2022
4. ವಿ.ವಿ. ಸುತ್ತೋಲೆ ಸಂಖ್ಯೆ: ಇಟಿ5/26/2020-21, ದಿನಾಂಕ: 12-12-2022
5. ಸಭಾ ಸೂಚಿ ಸಂಖ್ಯೆ: ಜಿಎಲ್5/98(1)/2022-23, ದಿನಾಂಕ: 13-12-2022
6. ವಿ.ವಿ. ಸುತ್ತೋಲೆ ಸಂಖ್ಯೆ: ಜಿಎಲ್4(8)/39/2017-18, ದಿನಾಂಕ: 14-12-2022
7. ವಿಶ್ವವಿದ್ಯಾನಿಲಯದ ಅಧಿಕಾರಿಗಳೊಂದಿಗೆ ನಡೆದ ಸಭೆಯ ದಿನಾಂಕ: 30-12-2022
8. ಐ.ಸಿ.ಡಿ. ಸುತ್ತೋಲೆ ಸಂಖ್ಯೆ: ಎಂಜಿಎಂ/ಐ.ಸಿ.ಡಿ./139/2022-23, ದಿನಾಂಕ: 05-01-2023
9. ಸಭಾ ಸೂಚಿ ಸಂಖ್ಯೆ: ಜಿಎಲ್13/137/2022-23, ದಿನಾಂಕ: 09-01-2023
10. ಸಭಾ ಸೂಚಿ ಸಂಖ್ಯೆ: ಜಿಎಲ್13/137/2022-23, ದಿನಾಂಕ: 10-01-2023
11. ಸಭಾ ಸೂಚಿ ಸಂಖ್ಯೆ: ಯುಎ2/259-ಇತರೆ/2022-23, ದಿನಾಂಕ: 13-01-2023

-:-

**'ಸುಶಾಸನ ಮಾಸ'**ದ ಅಂಗವಾಗಿ, ಕರ್ನಾಟಕದ ಪ್ರತಿಯೊಂದು ಸಾರ್ವಜನಿಕ ವಿಶ್ವವಿದ್ಯಾನಿಲಯವು 38 ಬಗೆಯ ಕಡ್ಡಾಯ ಪ್ರಕಟಣೆಗಳನ್ನು (Mandatory Disclosures) ತನ್ನ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸಬೇಕೆಂದು ಉಲ್ಲೇಖ 01ರ ಸರ್ಕಾರಿ ಆದೇಶದಲ್ಲಿ (ಭಾಗ-1) ಸೂಚಿಸಲಾಗಿರುತ್ತದೆ. ಮಾನ್ಯ ಉನ್ನತ ಶಿಕ್ಷಣ ಸಚಿವರು ಮೈಸೂರು ವಿಶ್ವವಿದ್ಯಾನಿಲಯದ ಮುಖಾಂತರವೇ 'ಸುಶಾಸನ ಮಾಸ'ದ ಆಚರಣೆಗೆ ಉಲ್ಲೇಖ 02ರನ್ವಯ ಚಾಲನೆಯನ್ನು ನೀಡಿರುತ್ತಾರೆ. ತದನಂತರ, 38 ಕಡ್ಡಾಯ ಪ್ರಕಟಣೆಗಳ ಪೈಕಿ ಸ್ನಾತಕೋತ್ತರ ಅಧ್ಯಯನ ವಿಭಾಗಗಳು ಮತ್ತು ಆಡಳಿತಾತ್ಮಕ ಶಾಖೆಗಳಿಗೆ ಅನ್ವಯಿಸುವ ಅಂಶಗಳನ್ನು ಗುರುತಿಸಿ, ಅವುಗಳಿಗೆ ಪೂರಕವಾದ ಮಾಹಿತಿಯನ್ನು ಐ.ಸಿ.ಡಿ. ವಿಭಾಗಕ್ಕೆ ಸಲ್ಲಿಸಲು ಉಲ್ಲೇಖ 03, 04, 06, ಮತ್ತು 08ರ ಸುತ್ತೋಲೆಯನ್ವಯ ತಿಳಿಸಲಾಗಿತ್ತು. ಮುಂದುವರೆದು, ಉಲ್ಲೇಖ 05, 07, 09, 10 ಹಾಗೂ 11ರನ್ವಯ ಸಭೆಗಳನ್ನು ನಡೆಸಿ ಕಡ್ಡಾಯ ಪ್ರಕಟಣೆಗಳಿಗೆ ಸಂಬಂಧಿಸಿದಂತೆ ಅಗತ್ಯ ಮಾಹಿತಿಯನ್ನು ಒದಗಿಸುವಂತೆ ಸೂಚಿಸಲಾಗಿತ್ತು. ಈ ಸಂಬಂಧ, ಈಗಾಗಲೇ ಸಾಕಷ್ಟು ಮಾಹಿತಿಯನ್ನು ಸಂಗ್ರಹಿಸಿ ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸಲಾಗಿದೆ. ಆದಾಗ್ಯೂ, ಕೆಲವೊಂದು ಅಧ್ಯಯನ ವಿಭಾಗಗಳು ಮತ್ತು ಕಚೇರಿಗಳು ಮಾಹಿತಿಯನ್ನು ಒದಗಿಸಿರುವುದಿಲ್ಲ.

ಆದ್ದರಿಂದ, ಮೈಸೂರು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಸುಶಾಸನ / Good Governance

ಟ್ಯಾಬ್‌ನಡಿ ಈ ಕೆಳಕಂಡ ಕ್ರಮಸಂಖ್ಯೆಗಳ ಮುಂದೆ ತಮ್ಮ ವಿಭಾಗದ/ಶಾಖೆಯ ವಿವರಗಳು ಅಪ್ಲೋಡ್ ಆಗಿವೆಯೇ ಎಂಬುದನ್ನು ಪರಿಶೀಲಿಸತಕ್ಕದ್ದು. ಒಂದು ವೇಳೆ ತಮ್ಮ ವಿಭಾಗದ/ಶಾಖೆಯ ಮುಂದೆ ಹೈಪರ್‌ಲಿಂಕ್‌ಗಳು ರೂಪುಗೊಂಡಿಲ್ಲವೆಂದರೆ, ಕೂಡಲೇ ಸಂಬಂಧಪಟ್ಟ ಮಾಹಿತಿಯನ್ನು ಐ.ಸಿ.ಡಿ.ಗೆ ಸಾಫ್ಟ್ ಕಾಪಿ ಕಳುಹಿಸುವ ಮೂಲಕ ಅಪ್ಲೋಡ್ ಮಾಡಿಸಬೇಕಾಗಿ ಈ ಮೂಲಕ ಸೂಚಿಸಲಾಗಿದೆ.

**1. ಕ್ರಸಂ. 06: ವಿಭಾಗಗಳಲ್ಲಿರುವ ಚರಾಸ್ತಿಗಳ ವಿವರ**

**2. ಕ್ರಸಂ. 07: ವಿಭಾಗಗಳು ಹೊಂದಿರುವ ಬ್ಯಾಂಕ್ ಖಾತೆ ಹಾಗೂ ಠೇವಣಿಗಳ ವಿವರ**

**3. ಕ್ರಸಂ. 17: ಬೋಧಕೇತರ ಸಿಬ್ಬಂದಿಗಳ ಕರ್ತವ್ಯ ಹಾಗೂ ಹೊಣೆಗಾರಿಕೆಗಳ ವಿವರ**

**ಈ ವಿಷಯವನ್ನು 'ಅತೀ ಜರೂರು' ಎಂದು ಪರಿಗಣಿಸುವುದು.**

ಆದೇಶದ ಮೇರೆಗೆ

ಕುಲಸಚಿವರಿಂದ ಕರಡು ಅನುಮೋದಿಸಿದೆ

ಉಪ ಕುಲಸಚಿವ(ಸಾಮಾನ್ಯ)

**ಇವರಿಗೆ:**

1. ಅಧ್ಯಕ್ಷರು/ನಿರ್ದೇಶಕರು, ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳು/ಕೇಂದ್ರಗಳು/ಸಂಸ್ಥೆಗಳು.
2. ಎಲ್ಲಾ ಬಟವಾಡೆ ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಸಂಯೋಜಕರು, ಐಸಿಡಿ, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾ.ಗಂ. ಮೈಸೂರು.
4. ಎಸ್ಟೇಟ್ ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ಪಿ.ಎಂ.ಇ.ಬಿ., ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ಆಡಳಿತಾಧಿಕಾರಿಗಳು, ಮಾನಸಗಂಗೋತ್ರಿ, ಮೈಸೂರು.
7. ಡಾ. ಜೆ. ಲೋಹಿತ್, ನೋಡಲ್ ಅಧಿಕಾರಿಗಳು(ಸುಶಾಸನ), ಆಂತರಿಕ ಗುಣಮಟ್ಟ ಖಾತರಿ ಘಟಕ, ಮಾನಸಗಂಗೋತ್ರಿ, ಮೈಸೂರು.
8. ಪ್ರಾಂಶುಪಾಲರು ಎಲ್ಲಾ ಘಟಕ ಕಾಲೇಜುಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
9. ಎಲ್ಲಾ ಉಪಕುಲಸಚಿವ/ಸಹಾಯಕ ಕುಲಸಚಿವ/ಅಧೀಕ್ಷಕರು, ಆಡಳಿತ/ಪರೀಕ್ಷಾ/ಹಣಕಾಸು ಶಾಖೆ, ಮೈವಿವಿ, ಮೈಸೂರು.
10. ಮಾನ್ಯ ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಯವರ ಆಪ್ತಸಹಾಯಕರು, ಮೈ.ವಿ.ವಿ.
11. ಕಛೇರಿ ಪ್ರತಿ.